ಎಂ.ವಿ.ಸಿ ನಂ.295/2025
ಪಿ. ಡಬ್ಲೂ .1



ಸಾಕ್ಷಿಯನ್ನು ದಿನಾಂಕ **02.07.2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ವಿ.ಆರ್.ಎಂ. ವಕೀಲರಿಂದ**

ಅಪಘಾತ ಹುಬ್ಬಳ್ಳಿಯ ಬಸ್ ನಿಲ್ದಾಣದ ಎದುರಿಗೆ ಮದ್ಯಾಹ್ನ 2 ಗಂಟೆಗೆ ಆಗಿತ್ತು. ಸದರಿ ಸ್ಥಳ ಸಂಚಾರ ದಟ್ಟಣೆ ಇರುವ ಸ್ಥಳ ಅಂದರೆ ಸರಿ. ಸದರಿ ಸ್ಥಳದಲ್ಲಿ ಸಂಚಾರ ಸಿಗ್ನಲ್ ವ್ಯವಸ್ಥೆ ಇದೆ ಅಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಸಂಚಾರಿ ಸಿಗ್ನಲ್ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತದ ವೇಳೆಯಲ್ಲಿ ರಸ್ತೆ ದಾಟಲು ಹೋಗಿ ನಾನೇ ಬಿದ್ದು ಗಾಯ ಮಾಡಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಆಗ ನನಗೆ ಯಾವ ವಾಹನ ಡಿಕ್ಕಿಪಡಿಸಿತು ಎಂದು ಗೊತ್ತಿಲ್ಲ ಅಂದರೆ ಸರಿಯಲ್ಲ, ಸದರಿ ವಾಹನದ ನಂಬರ್ ಗೊತ್ತಿಲ್ಲ ಅಂದರೆ ಸರಿ. ಒಂದು ವೇಳೆ ಕಾರು ಡಿಕ್ಕಿ ಪಡಿಸಿದ್ದರೇ ಅದರ ನಂಬರ್ ಗೊತ್ತಿರುತ್ತಿತ್ತು, ಯಾವುದೇ ಕಾರು ಡಿಕ್ಕಿ ಪಡಿಸಿಲ್ಲ ಅಂದರೆ ಸರಿಯಲ್ಲ. ಆ ದಿನ ನಾನು ಒಬ್ಬಳೇ ಇದ್ದೇನು. ಅಪಘಾತದ ಸ್ಥಳದಲ್ಲಿ ಇದ್ದ ಒಬ್ಬ ಆಟೋ ಚಾಲಕರು ಸದರಿ ಕಾರ್ ನಂಬರ್ ನನಗೆ ತಿಳಿಸಿದರು. ಸದರಿ ಆಟೋ ಚಾಲಕನ ಹೆಸರು ಗೊತ್ತಿಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತದ ಬಗ್ಗೆ ನಮ್ಮ ಅಣ್ಣ ದೂರು ನೀಡಿದರು. ಅಪಘಾತವನ್ನು ನನ್ನ ಅಣ್ಣ ನೋಡಿಲ್ಲ ಅಂದರೆ ಸರಿ. ದಿಃ**09-12-2024** ರಂದು ವಿವೇಕಾನಂದ ಆಸ್ಪತ್ರೆಯಲ್ಲಿ ದಾಖಲಾಗಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಎಡಗಾಲು ಬೆರಳು ಕತ್ತರಿಸಿ ಎಲುಬು ಮುರಿತದ ಗಾಯ ಆಗಿತ್ತು. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿ.ಪಿ.5 ರಲ್ಲಿ ನಾನು ಹೇಳಿದ ಯಾವುದೇ ಗಾಯಗಳು ನಮೂದು ಇಲ್ಲ ಎಂದರೆ ಸರಿಯಲ್ಲ. ವಿವೇಕಾನಂದ ಆಸ್ಪತ್ರೆಯ ದಾಖಲೆಯಲ್ಲಿ ನಿ.ಪಿ.5 ರಲ್ಲಿ ನನಗೆ ಸಾದಾ ಸ್ವರೂಪದ ಗಾಯ ಆಗಿದೆ ಎಂದು ಮಾತ್ರ ನಮೂದಿಸಲಾಗಿದೆ ಅಂದರೆ ಸರಿಯಲ್ಲ. ನಿ,ಪಿ.5 ರಲ್ಲಿ ಕೇವಲ ಊತ ಮಾತ್ರ ಇದೆ ಎಂದು ನಮೂದಿಸಿದ್ದಾರೆ ಎಂದು ಸುಳ್ಳು.

ದಿ:09-12-2024 ರಿಂದ 11-12-2024 ರ ವೆರೆಗ ದಾಖಲಿದ್ದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಿಕಿತ್ಸೆಗೆ 50 ಸಾವಿರ ರೂಪಾಯಿ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತದ ವೇಳೆಯಲ್ಲಿ ನಾನು ಫೈನಾನ್ಸನಲ್ಲಿ ಕೆಲಸ ಮಾಡಿ ತಿಂಗಳಿಗೆ 16 ಸಾವಿರ ರೂಪಾಯಿ ವೇತನ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಕೆಲಸಕ್ಕೆ ಸಂಬಂದಪಟ್ಟ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. 1 ನೇ ಎದುರುದಾರರ ಕಾರಿನಿಂದ ಯಾವುದೇ ಅಪಘಾತ ಆಗಿಲ್ಲ ಅಂದರೆ ಸರಿಯಲ್ಲ. ನಿ.ಪಿ.8 ಅನ್ನು ನನಗೆ ಅನುಕೂಲವಾಗುವ ರೀತಿಯಲ್ಲಿ ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ. 1 ನೇ ಎದುರುದಾರರ ಯಾವುದೇ ತಪ್ಪಿಲ್ಲದಿದ್ದರೂ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಖೊಟ್ಟಿ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿರುವ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

ಸಹಿ/-

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ

ಧಾರವಾಡ.